ರಾಜ್ಯದಲ್ಲಿ ಮಾರಾಟ ತೆರಿಗೆ ಸಂಗ್ರಹ

1652 (1968) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000-01, 2001-02ರ ಸಾಲಿನಲ್ಲಿ ಸರಕಾರ ಮಾರಾಟ ತೆರಿಗೆ ಸಂಗ್ರಹಿಸಲು ಉದ್ದೇಶಿಸಿದ ಗುರಿ ಎಷ್ಟು : (ಜಿಲ್ಲಾವಾರು ವಿವರ ನೀಡುವುದು)

ಆ) 2000-01, 2001-02ರ ಸಾಲಿನಲ್ಲಿ ಸರಕಾರ ಸಾಧಿಸಿದ ಮಾರಾಟ ತೆರಿಗೆ ಸಂಗ್ರಹಣೆಯೆಷ್ಟು : (ಜಿಲ್ಲಾವಾರು ವಿವರ ನೀಡುವುದು)

ಇ) ಮಾರಾಟ ತೆರಿಗೆ ಸಂಗ್ರಹದಲ್ಲಿ ಇಳಿಮುಖಕ್ಕೆ ಕಾರಣಗಳಾವುವು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಮಾರಾಟ ತೆರಿಗೆ ಕಾಯ್ದೆ ಅಡಿಯಲ್ಲಿ 2000-2001 ಮತ್ತು 2001-2002ರ ಸಾಲಿನಲ್ಲಿ ಸಂಗ್ರಹಿಸಲು ಉದ್ದೇಶಿಸಿದ ಗುರಿ ಕ್ರಮವಾಗಿ ರೂ. 5510.09 ಮತ್ತು 5708.00 ಕೋಟಿಗಳಷ್ಟು ನಿಗದಿ ಮಾಡಲಾಗಿತ್ತು. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಜಿಲ್ಲಾವಾರು ವಿಭಾಗಗಳು ಇಲ್ಲದೇ ಇರುವುದರಿಂದ ವಾಣಿಜ್ಯ ತೆರಿಗೆ ವಿಭಾಗವಾರು (ಒಂದಕ್ಕಿಂತ ಹೆಚ್ಚು ಜಿಲ್ಲೆಗಳು ಸೇರಿ) ನಿಗದಿಪಡಿಸಿರುವ ತೆರಿಗೆ ಸಂಗ್ರಹಣೆಯ ಗುರಿ ಈ ಕೆಳಕಂಡಂತೆ ಇರುತ್ತದೆ.

ವಿಭಾಗಗಳು	ಗುರಿ	
	ಕೋಟಿ ರೂ. ಗಳಲ್ಲಿ 2000-2001	ಕೋಟಿ ರೂ. ಗಳಲ್ಲಿ 2001-2002
ಬೆಂಗಳೂರು ನಗರ ವಿಭಾಗ-1	1631.09	1685.00
ಬೆಂಗಳೂರು ನಗರ ವಿಭಾಗ-2	450.00	453.05
ಬೆಂಗಳೂರು ನಗರ ವಿಭಾಗ-3	370.00	344.65
ಬೆಂಗಳೂರು ನಗರ ವಿಭಾಗ-4	1120.00	1344.20
ಬೆಂಗಳೂರು ವಿಭಾಗ	650.00	680.00
ಮೈಸೂರು	130.0	128.55
ಮಲೆನಾಡು	95.00	84.71
ಮಂಗಳೂರು	350.00	350.00
ಧಾರವಾಡ	250.00	243.33
ಬೆಳಗಾವಿ	230.00	199.88
ಗುಲ್ಬರ್ಗ	115.00	92.00
ದಾವಣಗೆರೆ	54.00	47.14
ಬಳ್ಳಾರಿ	65.00	55.49
ಒಟ್ಟು	**5510.09**	**5708.00**

ಅ) ಮಾರಾಟ ತೆರಿಗೆ ಕಾಯ್ದೆ ಅಡಿಯಲ್ಲಿ 2000-2001 ಮತ್ತು 2001-2002ರಲ್ಲಿ ವಾಣಿಜ್ಯ ತೆರಿಗೆ ವಿಭಾಗವಾರು (ಒಂದು ವಿಭಾಗವು ಒಂದಕ್ಕಿಂತ ಹೆಚ್ಚು ಜಿಲ್ಲೆಗಳನ್ನು ಒಳಗೊಂಡಿರುತ್ತದೆ) ತೆರಿಗೆ ಸಂಗ್ರಹಣೆ ಮಾಡಿದ ವಿವರ ಮಾಹಿತಿ ಈ ಕೆಳಕಂಡಂತಿದೆ.

ವಿಭಾಗಗಳು	ಸಂಗ್ರಹಿಸಿದ ಗುರಿ	
	ಕೋಟಿ ರೂ. ಗಳಲ್ಲಿ 2000-2001	ಕೋಟಿ ರೂ. ಗಳಲ್ಲಿ 2001-2002
ಬೆಂಗಳೂರು ನಗರ ವಿಭಾಗ-1	1620.63	1623.12
ಬೆಂಗಳೂರು ನಗರ ವಿಭಾಗ-2	437.11	452.65
ಬೆಂಗಳೂರು ನಗರ ವಿಭಾಗ-3	345.19	360.07
ಬೆಂಗಳೂರು ನಗರ ವಿಭಾಗ-4	1116.00	1204.49
ಬೆಂಗಳೂರು ವಿಭಾಗ	626.03	683.98
ಮೈಸೂರು	127.16	134.16
ಮಲೆನಾಡು	91.90	81.77
ಮಂಗಳೂರು	336.29	310.60
ಧಾರವಾಡ	235.39	226.20
ಬೆಳಗಾವಿ	217.64	196.13
ಗುಲ್ಬರ್ಗ	105.39	98.80
ದಾವಣಗೆರೆ	55.22	48.59
ಬಳ್ಳಾರಿ	60.87	56.12
ಒಟ್ಟು	**5374.82**	**5476.68**
ಗುಪ್ತವಾರ್ತೆ ವಲಯಗಳು	40.86	27.83
ಇತರೆ ಇಲಾಖೆಗಳ ಮೂಲಕ (ಓ.ಡಿ.ಸಿ.)	58.00	58.00
ಒಟ್ಟು	**5473.68**	**5562.51**

ಇ) 2001-2002ನೇ ಸಾಲಿನಲ್ಲಿ ಈ ಕೆಳಕಂಡ ಕಾರಣಗಳಿಂದ ತೆರಿಗೆ ಸಂಗ್ರಹಣೆಯಲ್ಲಿ ಕಡಿಮೆಯಾಗಿರುತ್ತದೆ.

1. ದಿನಾಂಕ : 16-2-2001 ರಿಂದ ಮದ್ಯಪಾನೀಯ ಮತ್ತು ರೆಕ್ಟಿಫೈಡ್ ಸ್ಪಿರಿಟ್ ಮೇಲಿನ ಮಾರಾಟ ತೆರಿಗೆಯನ್ನು ರದ್ದುಪಡಿಸಿ ಅಬಕಾರಿ ಸುಂಕಕ್ಕೆ ಸೇರಿಸಿದ್ದರಿಂದ ಮಾರಾಟ ತೆರಿಗೆ ಅಡಿಯಲ್ಲಿ ಬರಬೇಕಾಗಿದ್ದಷ್ಟು ತೆರಿಗೆ ಸಂದಾಯವಾಗಿರುವುದಿಲ್ಲ.
2. ಉತ್ಪಾದನಾ ವಲಯದ ಬೆಳವಣಿಗೆ ದರವು ಕನಿಷ್ಠ ಪ್ರಮಾಣಕ್ಕೆ (ಶೇ. 5.5 ರಷ್ಟು) ಇಳಿದಿದ್ದರಿಂದ ಮತ್ತು ಒಟ್ಟಾರೆ ಆರ್ಥಿಕ ವಲಯದ ಹಿನ್ನೆಡೆಯಿಂದ ಮಾರಾಟ ವಹಿವಾಟು ಕಡಿಮೆಯಾಗಿದ್ದರಿಂದ.

3. ಬಹು ದೊಡ್ಡ ಕೈಗಾರಿಕೆಗಳು ತೆರಿಗೆ ರಿಯಾಯಿತಿ ಉತ್ತೇಜನ ಕ್ರಮಗಳಡಿಯಲ್ಲಿ ಹಿಂದಿನ ವರ್ಷಕ್ಕಿಂತ ರೂ. 31 ಕೋಟಿಗಳ ಹೆಚ್ಚಿನ ಸವಲತ್ತು ಈ ವರ್ಷ ಉಪಯೋಗಿಸಿಕೊಂಡಿದ್ದರಿಂದ 2000-2001ರಲ್ಲಿ ಕೈಗಾರಿಕಾ ನೀತಿ ಅಡಿಯಲ್ಲಿ ಎಲ್ಲಾ ತರಹದ ಕೈಗಾರಿಕೆಗಳು ಉಪಯೋಗಿಸಿಕೊಂಡ ಉತ್ತೇಜನ ಮೊತ್ತ ಒಟ್ಟು ರೂ. 618.71 ಕೋಟಿ ಇದ್ದು 2001-2002ರಲ್ಲಿ ಈ ಮೊತ್ತವು ರೂ. 649.48 ಕೋಟಿಗಳಷ್ಟಾಗಿರುತ್ತದೆ.

ಉಡುಪಿ ಜಿಲ್ಲೆಯಲ್ಲಿ ಬಸ್ ನಿಲ್ದಾಣ ಹಾಗೂ ಡಿಪೋ ನಿರ್ಮಾಣ

1655 (1972) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಅಸ್ತಿತ್ವಕ್ಕೆ ಬಂದು ನಾಲ್ಕು ವರ್ಷಗಳಾದರೂ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸು ನಿಲ್ದಾಣ ಹಾಗೂ ಡಿಪೋ ನಿರ್ಮಾಣ ಮಾಡುವಲ್ಲಿ ವಿಳಂಬವಾಗಲು ಕಾರಣಗಳೇನು ;

ಆ) ಈಗಾಗಲೇ ನಿವೇಶನ ಒದಗಿಸಲು ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿದ್ದು ನಿವೇಶನವನ್ನು ಸರ್ಕಾರ ಸ್ವಾಧೀನ ಪಡಿಸುಕೊಳ್ಳುವಲ್ಲಿ ವಿಳಂಬವಾಗಲು ಕಾರಣಗಳೇನು ;

ಇ) ಜಿಲ್ಲಾ ಕೇಂದ್ರವು, ಧಾರ್ಮಿಕ ಪುಣ್ಯ ಕ್ಷೇತ್ರವಾದ ಉಡುಪಿಯಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ನಿಲ್ದಾಣ ನಿರ್ಮಾಣಕ್ಕೆ 2002-03ರ ಸಾಲಿನಲ್ಲಿ ಕಾದಿರಿಸಲಾದ ಹಣವೆಷ್ಟು ?

ಶ್ರೀ ರಮಾನಾಥ ರೈ (ಸಾರಿಗೆ ಸಚಿವರು) :

ಅ) ಉಡುಪಿಯ ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು ಅಲ್ಲಿಯ ಸಾರಿಗೆ ಅವಶ್ಯಕತೆಗಳನ್ನು ಖಾಸಗಿ ಸಂಸ್ಥೆಯವರು ಪೂರೈಸುತ್ತಿರುವರು. ಆದುದರಿಂದ ನಗರಸಭೆಯು ಉಡುಪಿಯಲ್ಲಿ ಬಸ್ ನಿಲ್ದಾಣ ಸೌಕರ್ಯ ಕಲ್ಪಿಸಿರುತ್ತಾರೆ. ಪ್ರಸ್ತುತ ಉಡುಪಿಯ ಮೂಲಕ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 100 ಸೇವೆಗಳು ಹಾದು ಹೋಗುತ್ತಿದ್ದು 10 ಸೇವೆಗಳು ಉಡುಪಿಯಿಂದಲೇ ಪ್ರಾರಂಭವಾಗುತ್ತಿದೆ. ಸಂಸ್ಥೆಯು ಸೂಕ್ತ ನಿವೇಶನವನ್ನು ಹೊಂದಿಲ್ಲದಿರುವುದರಿಂದ ಬಸ್ ನಿಲ್ದಾಣ ಹಾಗೂ ಬಸ್ ಘಟಕ ನಿರ್ಮಿಸಿರುವುದಿಲ್ಲ.

ಆ) ಸಂಸ್ಥೆಯು ಸ.ಸಂ : 76 : 1, 76 : 2 ರಲ್ಲಿ 1.04 ಎಕರೆಯನ್ನು ಹಾಗೂ ಸ.ಸಂ : 175 : 3 ರಲ್ಲಿ 2.60 ಎಕರೆ ಸರ್ಕಾರಿ ಜಾಗಗಳನ್ನು ಪಡೆದಿದ್ದು ಇವು ವಿಶಾಲವಾದ ಬಸ್ ನಿಲ್ದಾಣ ನಿರ್ಮಿಸಲು ಸಾಕಾಗುವುದಿಲ್ಲ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ 2.60 ಎಕರೆ ಜಾಗಕ್ಕೆ ಹೊಂದಿಕೊಂಡಿರತಕ್ಕ ಹಾಗೂ ಗೇರು ಬೀಜ ಅಭಿವೃದ್ಧಿ ನಿಗಮಕ್ಕೆ ಸೇರಿದ ಜಾಗವನ್ನು ಸಂಸ್ಥೆಗೆ ಪಡೆಯಲು ಪ್ರಯತ್ನ ಮಾಡಲಾಗುತ್ತಿದೆ.

ಇ) ಸಂಸ್ಥೆಯು ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ನಿವೇಶನವನ್ನು ಹೊಂದಿರದ ಕಾರಣ ಸಾರಿಗೆ ನಿಗಮದಿಂದ ಬಸ್ ನಿಲ್ದಾಣ ನಿರ್ಮಾಣಕ್ಕೆ 2002-03 ನೇ ಸಾಲಿನಲ್ಲಿ ಹಣವನ್ನು ಕಾಯ್ದಿರಿಸಿರುವುದಿಲ್ಲ.

ಯಲಹಂಕ ಉಪನಗರದ ನಾಲ್ಕನೇ ಹಂತಕ್ಕೆ ಬಿ.ಎಂ.ಟಿ.ಸಿ. ಎಕ್ಸ್‌ಪ್ರೆಸ್ ಬಸ್ ಸೌಲಭ್ಯ

1656 (1914) ಶ್ರೀ ಡಿ.ವಿ. ಸದಾನಂದ ಗೌಡ (ಪೂತ್ತೂರು) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?